ಗಳನ್ನು ಏಕೆ ಖರೀದಿ ಮಾಡಿದರು? ಖರೀದಿ ಮಾಡುವ ಸಂದರ್ಭದಲ್ಲಿ ಏನೇನು ಅವ್ಯವಹಾರವಾಗಿದೆ? ಯಾವ ಕಂಪನಿಯಿಂದ ಖರೀದಿ ಮಾಡಿದ್ದಾರೆನ್ನುವುದು ಬಹಳ ಮುಖ್ಯ. ದಯಮಾಡಿ ಸ್ಪಷ್ಟವಾಗಿ ಉತ್ತರ ಹೇಳಬೇಕು ಮತ್ತು ಅದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಸದನದಲ್ಲಿ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು. ತನಿಖೆ ಮಾಡಿಸಿ. ಆ ಕಾರ್ಖಾನೆಯನ್ನು, ಸಹಕಾರಿ ಸಂಘವನ್ನು Supercede ಮಾಡಬೇಕು ಮತ್ತು ಅವರು General Body Meeting ಮಾಡುವುದಿಲ್ಲ. ಇದಕ್ಕೆ ಅಧ್ಯಕ್ಷರು ಯಾರು ಎಂದು ಗೊತ್ತೇ? ನನಗಿಂತ ಹಿಂದೆ ನನ್ನ ತಾಲ್ಲೂಕಿನಲ್ಲಿ ಜನಪ್ರತಿನಿಧಿಯಾಗಿದ್ದರು. ಅವರೇ ಇದಕ್ಕೆ ಅಧ್ಯಕ್ಷರು. ಅವರು ಎಷ್ಟು ವರ್ಷಕ್ಕೆ ಒಂದು ಸಲ Meeting ಕರೆಯುತ್ತಾರೋ, ಯಾವಾಗ ಕರೆಯುತ್ತಾರೋ, ಏನು ಮಾಡುತ್ತಾರೋ ಎನ್ನುವುದರ ಬಗ್ಗೆ ಕಾರ್ಯಚಟುವಟಿಕೆಗಳೇ ಇಲ್ಲ. ಆದ್ದರಿಂದ, ಕೂಡಲೇ ಇದರ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಇಲ್ಲಿ ಏನು ಅವ್ಯವಹಾರವಾಗಿದೆ, ಅದರ ಬಗ್ಗೆ ಈ ಸಂಘವನ್ನು suprecede ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತಾ, ಅದರ ಬಗ್ಗೆ ಇವರು ಭರವಸೆ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಶ್ರೀ ಎಸ್.ಶಿವಣ್ಣ : ಮಾನ್ಯ ಛೇರ್ಮನ್‌ರವರೆ, ಈಗಾಗಲೇ ತಮ್ಮ ಮುಖಾಂತರ ಸದಸ್ಯರಿಗೆ ತಿಳಿಸಿದ್ದೇನೆ. ಏನು ಇಲ್ಲ ಅವ್ಯಹಾರವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈಗೇನು ಅವರು ಆಪಾದನೆ ಮಾಡಿದ್ದಾರೆ, ಇದು ಸತ್ಯವಾಗಿದ್ದರೆ ನಾನು ಮತ್ತು ಸಹಕಾರ ಮಂತ್ರಿಗಳು ಸೇರಿ ಕೂಲಂಕುಷವಾಗಿ ವಿಮರ್ಶೆ ಮಾಡಿ ಅವರು ತಪ್ಪಿತಸ್ಥರು ಆಗಿದ್ದರೆ, ಅದನ್ನು suprecede ಮಾಡತಕ್ಕಂಥದ್ದಕ್ಕೆ ನಾವು, ಸರ್ಕಾರ ಹಿಂದೆ ಮುಂದೆ ನೋಡುವುದಕ್ಕೆ ಹೋಗುವುದಿಲ್ಲ ಎಂದು ಸದನಕ್ಕೆ ನಾನು ಭರವಸೆ ಕೊಡುತ್ತೇನೆ.

ಕೋಳಿ ಸಾಕಾಣಿಕೆಗೆ ಸಬ್ಸಿಡಿ ನೀಡುವುದು

206 (1093) ಶ್ರೀ ಶ್ರೀನಿವಾಸಗೌಡ .ಕೆ.(ಕೋಲಾರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಕೋಳಿ ಸಾಕಾಣಿಕೆ ಮಾಡುತ್ತಿದ್ದರೆ ಅವರಿಗೆ ಸಬ್ಸಿಡಿ ಕೊಡಲಾಗುವುದೇ;

ಆ) ಕೊಟ್ಟಿದಲ್ಲಿ, ಮೊಟ್ಟೆ/ ಮಾಂಸಕ್ಕಾಗಿ ಎಷ್ಟು ಪ್ರಮಾಣದಲ್ಲಿ ಸಬ್ಸಿಡಿ ಕೊಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಶಿವಾನಂದ ಎನ್.ನಾಯ್ಕ (ಸಣ್ಣ ಕೈಗಾರಿಕಾ ಸಚಿವರು) :

ಅ) 2006-11ರ ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಕೋಳಿ ಸಾಕಾಣಿಕೆ ಚಟುವಟಿಕೆಯನ್ನು ನಿರ್ಭಂಧಿತ ಪಟ್ಟಿಯಲ್ಲಿ ಸೇರಿಸಿದ್ದು ಬಂಡವಾಳ ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ. 1996-2001ರ ಕೈಗಾರಿಕಾ ನೀತಿ ಚಾಲ್ತಿಯಲ್ಲಿರುವ ಅವಧಿಯಲ್ಲಿ ಕೋಳಿ ಸಾಕಾಣಿಕೆಗೆ ಬಂಡವಾಳ ಸಹಾಯಧನವನ್ನು ಸರ್ಕಾರಿ ಆದೇಶ ದಿನಾಂಕ: 14-5-99 ರಂತೆ ಮಂಜೂರಾತಿ ನೀಡಲು ಪ್ರಾರಂಭಿಸಲಾಯಿತು. ಸುತ್ತೋಲೆ ದಿನಾಂಕ: 4-12-2001ರಲ್ಲಿ ಕೋಳಿ ಸಾಕಾಣಿಕೆಗೆ ಸಹಾಯಧನ ಮಂಜೂರು ಮಾಡುವುದನ್ನು ಹಿಂತೆಗೆದುಕೊಳ್ಳಲಾಗಿದೆ.

ಆ) 1996-2001ರ ಕೈಗಾರಿಕಾ ನೀತಿಯಡಿಯಲ್ಲಿ ಪ್ರಾರಂಭಿಸಿದ ಮೊಟ್ಟೆ ಕೋಳಿ ಮತ್ತು ಮಾಂಸದ ಕೋಳಿ ಘಟಕಗಳಲ್ಲಿ ಹೂಡಿದ ಒಟ್ಟು ಸ್ಥಿರ ಬಂಡವಾಳದ ಮೇಲೆ ನಿರ್ದಿಷ್ಟ ಶೇಕಡವಾರು ಪ್ರಮಾಣದಲ್ಲಿ, ಘಟಕದ ಸ್ಥಾಪನೆಯ ವಲಯ ಹಗೂ ವಿಶೇಷ ವರ್ಗಗಳಿಗನುಗುಣವಾಗಿ ಮಂಜೂರು ಮಾಡಲಾಗಿದೆ. ಮೊಟ್ಟೆ ಕೋಳಿ ಸಾಕಾಣಿಕೆ ಘಟಗಳಿಗೆ ಮಂಜೂರಾತಿಯಾಗಿ ಬಾಕಿಯಿದ್ದ ಸಂಪೂರ್ಣ ಸಹಾಯಧನ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಮಾಂಸದ ಕೋಳಿ ಘಟಕಗಳಿಗೆ ದಿ: 1-1-1999 ರಿಂದ 31-3-2004ರ ವರದಿಗೆ ಒಟ್ಟು 1684 ಘಟಕಗಳಿಗೆ ರೂ. 31.45 ಕೋಟಿ ಮಂಜೂರಾದ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. (ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ). ದಿನಾಂಕ: 5-2-2004 ಮತ್ತು 7-7-2005 ರಂದು ನಡೆದ ಸಚಿವ ಸಂಪುಟದ ಸಭೆಯ ನಿರ್ಧಾರದಂತೆ ಕೋಳಿ ಸಾಕಾಣಿಕೆ ಬ್ರಾಯ್ಲರ್ ಘಟಕಗಳಿಗೆ ಸಹಾಯಧನ ಬಿಡುಗಡೆಯಾಗಿರುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1093 ರ ಅನುಬಂಧ			
ಕ್ರ. ಸಂ.	ಜಿಲ್ಲೆಗಳು	ಕೋಳಿ ಸಾಕಾಣಿಕೆ (ಬ್ರಾಯ್ಲರ್)	
		ಘಟಕಗಳ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1	ಬಾಗಲಕೋಟೆ	37	38.63
2	ಬೆಂಗಳೂರು (ಗಾಮಾಂತರ)	377	891.98
3	ಬೆಂಗಳೂರು (ನಗರ)	94	386.15
4	ಬೆಳಗಾಂ	61	48.00
5	ಬಳ್ಳಾರಿ	46	38.22
6	ಬೀದರ್	0	0.00
7	ಬಿಜಾಪುರ	11	14.66
8	ಚಾಮರಾಜನಗರ	10	7.46
9	ಚಿಕ್ಕಮಗಳೂರು	30	20.21
10	ಚಿತ್ರದುರ್ಗ	19	16.61
11	ದಕ್ಷಿಣ ಕನ್ನಡ	15	38.92
12	ದಾವಣಗೆರೆ	14	13.06
13	ಧಾರವಾಡ	22	53.70
14	ಗದಗ್	4	9.28
15	ಗುಲ್ಬರ್ಗಾ	0	0.00
16	ಹಾಸನ	37	23.34
17	ಹಾವೇರಿ	15	103.46
18	ಕೊಡಗು	0	0.00
19	ಕೋಲಾರ	419	898.31
20	ಕೊಪ್ಪಳ	15	9.92
21	ಮಂಡ್ಯ	85	74.61
22	ಮೈಸೂರು	46	59.75

23	ರಾಯಚೂರು	7	4.79
24	ಶಿವಮೊಗ್ಗ	37	46.29
25	ತುಮಕೂರು	107	166.40
26	ಉಡುಪಿ	32	49.42
27	ಉತ್ತರ ಕನ್ನಡ	144	132.29
	ಒಟ್ಟು	**1684**	**3145.46**

ಡಾ: ಎಂ. ಪಿ. ಸುಧಾಕರ್ (ಕೆ.ಶ್ರೀನಿವಾಸಗೌಡರ ಪರವಾಗಿ) : ಮಾನ್ಯ ಛೇರ್ಮನ್‌ರವರೆ, 1996–2001ರ ಕೈಗಾರಿಕಾ ನೀತಿ ಅಡಿಯಲ್ಲಿ ಕೋಳಿ ಸಾಕಾಣಿಗೆ ಪ್ರೋತ್ಸಾಹ ಕೊಡುವಂಥ ವ್ಯವಸ್ಥೆ ಇತ್ತು. ಆ ಸಂದರ್ಭದಲ್ಲಿ ಅದಕ್ಕೆ ಬಹಳಷ್ಟು ಹಣವನ್ನು ಸಹ ಬಿಡುಗಡೆಗೊಳಿಸಿದರು. Boiler ಕೋಳಿ ಸಾಕಾಣಿಕೆಯಲ್ಲಿ ಸುಮಾರು 31 ಕೋಟಿ ಅಂದರೆ ಇರುವ ಘಟಕಗಳ ಸಂಖ್ಯೆ 1684, ಇದಕ್ಕೆ ಹಣ ಬಿಡುಗಡೆಗೊಳಿಸಬಾರದು ಎಂದು ಹೇಳಿ 2004ರಲ್ಲಿ ಮತ್ತು 2005ರಲ್ಲಿ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದೆ ಎಂದು ಹೇಳಿ ಉತ್ತರ ಕೊಟ್ಟಿರುತ್ತಾರೆ. ನಾನು ಅವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ, ಈಗಾಗಲೇ 2006 ಮತ್ತು 2011ರ ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಈ ಚಟುವಟಿಕೆಗೆ ನಿರ್ಬಂಧವನ್ನು ವಿಧಿಸಲಾಗಿದೆ ಎಂದು ಹೇಳಿ ಉತ್ತರವನ್ನು ನೀಡಿರುತ್ತಾರೆ. ಯಾವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ? ಆ ಪಟ್ಟಿ ನೋಡಿದಾಗ, ಬಹುತೇಕ ಬೆಂಗಳೂರು ಗಾಮಾಂತರ, ಬೆಂಗಳೂರು ನಗರ ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಘಟಕಗಳಿವೆ. ಇದರಿಂದ ತಮ್ಮ ಜೀವನವನ್ನು ಸಾಗಿಸುವುದು ಹೇಗೆ? ಇವತ್ತು ಕೋಳಿ ಮಾಂಸವನ್ನು ತಿನ್ನುವಂಥವರ ಸಂಖ್ಯೆ ಎಷ್ಟು ಹೆಚ್ಚಾಗಿದೆ? ಇವತ್ತು ಎಷ್ಟು ಬೇರೆ ಕಡೆ ಹೋಗುತ್ತಿವೆ ಎನ್ನತಕ್ಕಂಥದ್ದನ್ನು ತಾವು ಗಮನಿಸಬೇಕಾಗಿದೆ. ಈ ರೀತಿ ಪ್ರೋತ್ಸಾಹ ನೀಡುವುದು ಬಿಟ್ಟು, ಯಾವ ರೀತಿಯಾಗಿ Subsidy ಕೊಡಬೇಕೆಂಬ ಬಗ್ಗೆ ಅದರಲ್ಲೂ ಬಹಳಷ್ಟು ನಿರ್ಬಂಧಗಳಿವೆ. ಇವುಗಳಿಗೆಲ್ಲ ಈ ರೀತಿಯಾಗಿ ನೀವು ಪ್ರೋತ್ಸಾಹ ನೀಡುವುದು ಬಿಟ್ಟು, ಇದಕ್ಕೆ ನಿರ್ಬಂಧವನ್ನು ವಿಧಿಸಿಕೊಂಡು ಹೋದರೆ, ಯಾವ ರೀತಿಯಾಗಿ ಪ್ರೋತ್ಸಾಹ ನೀಡುವುದು ಬಿಟ್ಟು, ಇದಕ್ಕೆ ನಿರ್ಬಂದವನ್ನು ವಿಧಿಸಿಕೊಂಡು ಹೋದರೆ, ಯಾವ ರೀತಿಯಾಗಿ ಅಲ್ಲಿರತಕ್ಕಂಥ ಜನ ಬದುಕಬೇಕು? ಅಲ್ಲಿ ಬೇರೆ ಆಧಾರಗಳಿಲ್ಲ, ಬೇರೆ

ಮಾರ್ಗಗಳು ಬದುಕಲಿಕ್ಕ ಎಇಲ್ಲ. ಅವರು ಹೈನುಗಾರಿಕೆ ಮೇಲೆಯೇ ಅವಲಂಬಿತರಾಗಿದ್ದಾರೆ. ಒಂದು ಕಡೆ, ತೋಟಗಾರಿಕೆ ಬೆಳೆ ಪದ್ಧತಿಗಳ ಮೇಲೆ, ವಾಣಿಜ್ಯ ಬೆಳೆಗಳ ಮೇಲೆ ಅಬಲಂಬಿತರಾಗಿದ್ದಾರೆ. ಈ ರೀತಿ ಪರ್ಯಾಯ ಬದುಕಿನ ಮಾರ್ಗವನ್ನು ಹುಡುಕಿರುವಂಥವರಿಗೆ ಈ ರೀತಿ ತಾವು ನಿರ್ಬಧಗಳನ್ನು ವಿಧಿಸಿದರೆ, ಸರ್ಕಾರದ ಉದ್ದೇಶವೇನು? ಏಕೆ ಈ ರೀತಿಯ ನಿಲುವನ್ನು ಹೊಂದಿದ್ದೀರಿ ಎನ್ನುವ ಬಗ್ಗೆ ಉತ್ತರ ಕೊಡಬೇಕು. ಖಂಡಿತವಾಗಿ, ಇದನ್ನು ಸೇರಿಸಬೇಕು ಇದರ ಸಹಾಯಕ್ಕೆ ತಾವು ನಿಲ್ಲಬೇಕೆಂದು ನಾನು ತಮ್ಮ ಮುಖಾಂತರ ಅವರನ್ನು ಕೋರುತ್ತೇನೆ.

ಶ್ರೀ ಶಿವಾನಂದ ಎಂ.ನಾಯಕ್ : ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ, ಈ ಹೊಸ ಸರ್ಕಾರ ಬಂದ ಮೇಲೆ ಇದನ್ನು ನಿಲ್ಲಿಸಿರುವುದಲ್ಲ. 2001ರಲ್ಲಿ ಮಾಂಸದ ಕೋಳಿಗೆ ಮತ್ತು ಕೋಳಿ ಫಾರ್ಮ್‌ಗೆ subsidy ಕೊಡಬಾರದು ಎಂದು ನಿಲ್ಲಿಸಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ, ಹೊಸ ಕೈಗಾರಿಕಾ ನೀತಿಯನ್ನು ತಂದ ಮೇಲೆ ಕೂಡ ಅದನ್ನು ಕೊಡುವಂಥದ್ದನ್ನು ನಾವು ಮುಂದುವರಿಸಲಿಲ್ಲ. ಏಕೆಂದರೆ, ಹಿಂದಿನ ಸರ್ಕಾರ ಅದನ್ನು ನಿಲ್ಲಿಸಿದ್ದರು. ಹಿಂದಿನ ಸರ್ಕಾರ ನಿಲ್ಲಿಸಿರುವ subsidy ಯನ್ನು ಕೂಡ ನಮ್ಮ ಸರ್ಕಾರ ಬಂದ ಮೇಲೆ 1999 ರಿಂದ ಅಥವಾ ಬಾಕಿ ಇರುವ subsidy ಗಳನ್ನು ನಾವು ವಿಶೇಷವಾಗಿ ನಮ್ಮ ಸರ್ಕಾರ ಬಂದ ಮೇಲೆ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ, ಉಳಿದ ವಿವಿಧ ಕೈಗಾರಿಕೆಗಳಿಗೆ ಸೇರಿ ನಾವು 99 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಮೊಟ್ಟೆ ಕೋಳಿಗೆ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೋಲಾರದಲ್ಲಿ 7 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಿಮ್ಮ ಕೋಲಾರ ಜಿಲ್ಲೆಗೆ ಮಾಂಸದ ಕೋಳಿಗಾಗಿ 10 ಕೋಟಿ ರೂಪಾಯಿ ಬಾಕಿ ಇದೆ. ಆದರೆ, ಈ ಆರ್ಥಿಕ ವರ್ಷದಲ್ಲಿ ಕೊಡುತ್ತೇನೆ ಎನ್ನುವಂಥ ಭರವಸೆಯನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ ಮತ್ತು ಈ ವರ್ಷದ ಆರ್ಥಿಕ ವರ್ಷದಲ್ಲಿ ನಮಗೆ 75 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ತಾವು ಕೇಳಿರುವಂತ ಕೋಳಿ ಫಾರ್ಮ್‌ಗೆ ಕೂಡ subsidy ಯನ್ನು ಕೊಡಬೇಕು. ಇವನ್ನು ಹೊಸ ಕೈಗಾರಿಕಾ ನೀತಿಯಲ್ಲಿ ತರಲಿಲ್ಲ. ಆದರೆ, ಇದು ನಮ್ಮ ಕೈಗಾರಿಕಾ ನೀತಿಯಲ್ಲ. 2002ರ ಕೈಗಾರಿಕಾ ನೀತಿಯಲ್ಲೂ ಕೂಡ ಅದು ಬಂದಿರಲಿಲ್ಲ. ಅದನ್ನು ನಿಲ್ಲಿಸಿದ್ದರು. ನಿಲ್ಲಿಸಲಿಕ್ಕೆ

ಕಾರಣವೇನೆಂದರೆ, ಅದು ಕೃಷಿಗೆ ಸಂಬಂಧಪಟ್ಟಂಥ ಒಂದು ಉದ್ಯೋಗವಾಗಿದ್ದರಿಂದ subsidy ಕೊಡಲಿಕ್ಕೆ ಬರುವುದಿಲ್ಲವೆಂದು ಹಿಂದಿನ ಸರ್ಕಾರ ನಿಲ್ಲಿಸಿರುವುದು. ಈ ಸರ್ಕಾರ ಅದನ್ನು ನಿಲ್ಲಿಸಲಿಲ್ಲ ಮತ್ತು ಮುಂದಿನ ದಿವಸಗಳಲ್ಲಿ ಅದರ ಬಗ್ಗೆ ಚಿಂತನೆ ಮಾಡುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ: 27–07–2007 ರಂದು 15 ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಉತ್ತರಗಳನ್ನು ಹಾಗೂ ತಡೆಹಿಡಿಯಲಾದ ಒಂದು ಪ್ರಶ್ನೆಯ ಉತ್ತರ ಮತ್ತು ಲಿಖಿತ ಮೂಲಕ ಉತ್ತರಿಸುವ 72 ಪ್ರಶ್ನೆಗಳ ಪೈಕಿ 59 ಉತ್ತರಗಳನ್ನು ಮತ್ತು ದಿನಾಂಕ: 30–07–2007 ರಂದು 16ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 51 ಪ್ರಶ್ನೆಗಳ ಪೈಕಿ 41 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಛೇರ್ಮನ್ : ಮಂಡಿಸಲಾಯಿತು.

(ಅನುಬಂಧ–3)

ಛೇರ್ಮನ್ : ಈಗ ಗಮನ ಸೆಳೆಯುವ ಸೂಚನೆಗಳು. ಶ್ರೀ ಕೆ.ಆರ್. ರಮೇಶ್‌ಕುಮಾರ್. ಈಗ ಗಮನ ಸೆಳೆಯುವ ಸೂಚನೆಗಳಾಗಲಿ. ನಂತರ ಕೇಳಿ. ಆಯಿತು ಕೇಳಿ.

ಶ್ರೀ ಜಿ.ಎಸ್. ಗಡ್ಡದೇವರ ಮಠ್ : ಅರಣ್ಯ ಸಚಿವರು ಇಲ್ಲವೆಂದು ಸುಮಾರು 8 ದಿವಸಗಳಿಂದ ನಾವು ಮುಂದು ಹಾಕಿಕೊಳ್ಳುತ್ತಾ ಬಂದಿದ್ದೇವೆ.

ಛೇರ್ಮನ್ : ಕೇಳಿ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಅ) ವಿಷಯ : ಬಾಳೆ ಹೊಸೂರು ಗ್ರಾಮದಲ್ಲಿ ನವಿಲುಗಳ ಮರಣ ಹೋಮದ ಬಗ್ಗೆ.

ಶ್ರೀ ಜಿ.ಎಸ್.ಗಡ್ಡದೇವರ ಮಠ್(ಶಿರಹಟ್ಟಿ) : ನನ್ನ ಮತಕ್ಷೇತ್ರದ ಬಾಳೇಹೊಸೂರು ಗ್ರಾಮದಲ್ಲಿ 22ನೇ ತಾರೀಖಿಗೆ ಬಹಳ ಅನಾಯಾಸವಾಗಿ 13 ನವಿಲುಗಳು ಸಾಯುವಂಥ ಪ್ರಸಂಗ ಈಗಾಗಲೇ ತಮಗೆಲ್ಲ